ಕವಿತೆ




## ವಸುಂಧರಾ ಕದಲೂರು

ಕಲೆ: ಪ್ರಭಾಕರ ಹೆಗಡೆ




# ಕೆಂಪು ನೆಲದ ಹೂ

ಸುತ್ತ ಹಸಿರು ಎಲೆಬಳ್ಳಿ
ಹೊತ್ತ ಸಾಲು ಸಾಲುಮರ
ನಟ್ಟನಡುವೆ ಕೆಂಪು
ಹೂ ಬಿಟ್ಟ ಒಂಟಿ ಗಿಡ
ನೆಟ್ಟದ್ದೋ.. ಹಕ್ಕಿ ಹಿಕ್ಕೆಗೆ
ಹುಟ್ಟಿದ್ದೋ
ಬೇಕಿಲ್ಲ ಕಾರಣ
ಅನ್ಯಾವರಣದಿ ಅನನ್ಯ
ಹೂ ಅರಳಿಸಿ ನಗೆ ಬೀರುವ
ಕೆಂಪುಹೂ ಗಿಡದ ಹಸಿರೆಲೆಗಳು
ಗಾಳಿಗೆ ಅಲುಗಿ ಹಸುರುಟ್ಟ
ಇನ್ನೊಂದು ಮರದೊಡನೆ
ಪಿಸುಗುಟ್ಟಿ ಮೆಲುನುಡಿದರೆ
ಕೆಂಪುಹೂ ಗಿಡದೆದೆಯೊಳಗೆ
ಸಣ್ಣ ಕಂಪನ; ಈ ಹಸಿರೆಲ್ಲ ಅತ್ತ
ಹಾರಿ ತನ್ನುಸಿರು ನಿಂತರೇ
ಕಳವಳಿಸುವ ಹೂ ಗಿಡದ
ಬೇರುಗಳು ಬೆದರುತ್ತವೆ
ಕೆಳಗೆ ನೆಲದೊಡಲ ಜೀವಜಲ
ಗಿಡವ ಸಂತೈಸುತ್ತದೆ
ಕೆಂಪುನೆಲ ತನ್ನ ರಂಗನು
ಹೂಗಳಿಗೆ ತುಂಬುತ್ತದೆ.